ಪಿ.ಡಬ್ಲ್ಯೂ1 ಸಿ. ಸಿ.ನಂ. 746/2014

ದಿನಾಂಕಃ 20-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಸ. ಸ. ಅ ರವರಿಂದಃ

ದಿಃ03-04-2010 ರಂದು ಆರೋಪಿಯು 7 ಚೆಕ್ ಗಳಲ್ಲಿ ಹಣವನ್ನು ಡ್ರಾ ವಾಡಿದ್ದು ಚೆಕ್ ನಂ. 632953, ದಿಃ 07-04-2010 ಹಣ 35 ಸಾವಿರ. ಚೆಕ್ ನಂ. 632954, ದಿಃ10-04-2010, ಹಣ 40 ಸಾವಿರ. ಈ ರೀತಿ 7 ಚೆಕ್ ಗಳ ಮೂಲಕ 3,32,500. ರೂಗಳ ಹಣವನ್ನು ಡ್ರಾ ಮಾಡಿಕೊಂಡಿರುತ್ತಾರೆ. 5 ಚೆಕ್ ಗಳನ್ನು ಲಕ್ಷ್ಮೀಪತಿ ಖಾತೆಗೆ ಹಾಕಿ 42,57,930/ ರೂಗಳನ್ನು ಖಾತೆಗೆ ವರ್ಗಾವಣೆ ಮಾಡಿರುತ್ತಾರೆ. 2011 ರಲ್ಲಿ ಮುಖ್ಯ ಕಛೇರಿಗೆ ಆರೋಪಿ ಹೋಗಿ ಹಣವನ್ನು ನಾನೇ ದುರುಪಯೋಗಪಡಿಸಿಕೊಂಡಿರುತ್ತೇನೆ ಅಂತ ಪತ್ರವನ್ನು ಬರೆದುಕೊಟ್ಟಿರುತ್ತಾರೆ 2 ಚೆಕ್ ಗಳನ್ನು 35 ಸಾವಿರ ಮತ್ತು 40 ಸಾವಿರ ಗಳಿಗೆ ಕೊಟ್ಟು ಹೆಚ್ಚುವರಿಯಾಗಿ ನಾನು ಕಟ್ಟಬೇಕಾದರೆ ಇನ್ನು ಸಹಿ ಮಾಡಿ ಎರಡು ಖಾಲಿ ಚೆಕ್ ಗಳನ್ನು ನೀಡಿರುತ್ತಾರೆ. ಒಟ್ಟು ಆರೋಪಿ ಸುಮಾರು 1,05,00,000/ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಕಂಡುಬಂದಿರುತ್ತದೆ. ಈ ಎಲ್ಲಾ ವಿವಾದಕ್ಕೆ ಸಂಬಂಧಿಸಿದಂತ ದಾಖಲೆಗಳನ್ನು ಮುಖ್ಯ ಕಛೇರಿಯವರೇ ಇಟ್ಟುಕೊಂಡಿದ್ದು ನನ್ನ ಬಳಿ ಇರುವುದಿಲ್ಲ ನಾನು ದೂರು ಮಾಡಲು ಹೇಳಿದ್ದು ದೂರು ದಾಖಲು ಮಾಡಿರುತ್ತೇನೆ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.